**37** ನೇ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಲಯ, ಬೆಂಗಳೂರು

ಸಿ.ಸಿ. ನಂ. **13412/2019**

ಫ್ರಾ.ಸಃ **4** ಚಾ.ಸಃ **2**

| | |
|---|---|
| ಸಾಕ್ಷಿದಾರರ ಹೆಸರು | ವಸಂತ |
| ತಂದೆಯ ಹೆಸರು | ಮಹದೇವ |
| ವಯಸ್ಸು | 32 ವರ್ಷ |
| ಉದ್ಯೋಗ | ಗೃಹಿಣಿ |
| ವಿಳಾಸ | ಜಯನಗರ, ಬೆಂಗಳೂರು. |
| ಪ್ರ ವ ಬೋ ದಿನಾಂಕ | 23/08/2022 |

ಮುಖ್ಯ ವಿಚಾರಣೆಃ ಹಿ.ಸ.ಸ. ಅ ರವರಿಂದಃ

ನನಗೆ ಚಾಸಾ.1 ರವರ ಪರಿಚಯ ಇಲ್ಲ. ಅದೇ ರೀತಿ ಈಗ ನ್ಯಾಯಲಯದ ಮುಂದೆಯಿರುವ ಆರೋಪಿತರ ಪರಿಚಯ ಇಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿಲ್ಲ. ಪ್ರಕರಣದ ಕುರಿತು ನಾನು ಪೊಲೀಸರಿಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಹಿ.ಸ.ಸ.ಅ. ರವರು ಅನುಮತಿ ಕೋರಿರುತ್ತಾರೆ. ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

ಪಾಟೀ ಸವಾಲುಃ ಮಾನ್ಯ ಹಿ.ಸ. ರವರರಿಂದಃ

ಶ್ರೀಮತಿ ಉಮಾ ಮಹೇಶ್ವರಿ ರವರು ನಮ್ಮ ಮನೆಯ ಮಾಲೀಕರಾಗಿರುತ್ತಾರೆ. ಇವರು ಹಾಗೂ ಇವರ ಭಾವನರಾದ ಶ್ರೀ ಸುಂದರ ಮೂರ್ತಿ ರವರ ನಡುವೆ ನಾವು ಈಗ ವಾಸವಿರುವ ಬಿಲ್ಡಿಂಗ್ ಆಸ್ತಿ ಹಂಚಿಕೆ ವಿಚಾರವಾಗಿ ಈಗ್ಗೆ ಸುಮಾರು 8-9 ವರ್ಷಗಳಿಂದ ವಿವಾದ ಇದ್ದು, ಈ ಬಗ್ಗೆ ಎರಡೂ ಕಡೆಯವರು ಸಹ ಒಬ್ಬರ ಮೇಲೆ ಒಬ್ಬರು ಪರಸ್ಪರ ಕೇಸುಗಳನ್ನು ಹಾಕಿಕೊಂಡಿರುತ್ತಾರೆ ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಮುಂದುವರೆದು ದಿ. 31/08/2018 ರಂದು ಸಂಜೆ ಸುಮಾರು 06.50 ಗಂಟೆ ಸಮಯದಲ್ಲಿ ನಮ್ಮ ಮನೆಯ ಮಾಲೀಕರಾದ ಉಮಾ ಮಹೇಶ್ವರಿ ರವರು ಹಾಗೂ ನಾನು ನಮ್ಮ ಮನೆಯ ಮುಂದಿನ ಪ್ಯಾಸೇಜ್

ನಲ್ಲಿ---------------------------------------------------------------------------------
---------------------------------------------------------------------------------------

ಉಮಾ ಮಹೇಶ್ವರಿರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಹೆಲ್ಮೆಟ್ ನಿಂದ ಹೊಡೆದು ರಕ್ತಗಾಯ ಪಡಿಸ ಅವರ ಬಟ್ಟೆಗಳನ್ನು ಹರಿದು ಹಾಕಿ, ಅವರ ಮಾನಭಂಗ ಮಾಡಲು ಪ್ರಯತ್ನಿಸಿದ ಸುಂದರ ಮೂರ್ತಿ ಹಾಗೂ ಅವರ ಮಗ ಹರೀಶ್ ಕುಮಾರ್ ಎಂಬುವರನ್ನು ನಾನು ನೋಡಿದ್ದ, ಪುನಃ ನೋಡಿದರೆ ಗುರುತಿಸುತ್ತೇನೆ ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ಸಾಕ್ಷಿ ನಿರಾಕರಿಸಿದರ ಮೇರೆಗೆ ಅದನ್ನು ನಿಪಿ.7 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

ಓ.ಹೇ. ಕೇ. ಸ. ಇ. ಒ

**37** ನೇ ಅ.ಮು. ಮ. ದಂ. ನ್ಯಾ